ಅಸಲು ದಾವಾಃ- 242/2021 ಡಿ.ಡಬ್ಲ್ಯೂಃ- 2

ದಿನಾಂಕಃ 04.03.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಜಿ ಎಸ್ ಆರ್ ವಕೀಲರಿಂದ

ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗಳಿಗೂ ಹಾಗೂ ಪ್ರತಿವಾದಿ 1 ಹಾಗೂ ನಮಗೆ ಸಮನಾದ ಹಕ್ಕು ಇದೆ ಎಂದರೆ ಸಾಕ್ಷಿಯು ದಾವಾ ಐಟಂ ನಂಬರ್ 2 ನ್ನು ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ಖರೀದಿ ಮಾಡಿದ್ದು ಅದರಲ್ಲಿ ವಾದಿಗಳಿಗೆ ಹಕ್ಕು ಇಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂಬರ್ 2 ನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವ ವರ್ಷ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. 8 ರಿಂದ 12 ವರ್ಷದ ಮಕ್ಕಳು ಶಾಲೆಗೆ ಹೋಗುತ್ತಾರೆ ಹಾಗೂ ಆಟ ಆಡುವ ವಯಸ್ಸು ಎಂದರೆ ಸರಿ. ನಿಡಿ 1 ಕ್ರಯಪತ್ರದ ಪ್ರಕಾರ ನನ್ನ ಗಂಡನಿಗೆ 10 ವರ್ಷ ಹಾಗೂ 1 ನೇ ಪ್ರತಿವಾದಿಗೆ 12 ವರ್ಷ ಎಂದರೆ ನಮಗೆ ಗೊತ್ತಿಲ್ಲ.

ನನ್ನ ಗಂಡ ಹಾಗೂ 1 ನೇ ಪ್ರತಿವಾದಿ ತಿಮ್ಮಪ್ಪರವರು ದಾವಾ ಐಟಂ ನಂಬರ್ 2 ಖರೀದಿಯ ಕಾಲಕ್ಕೆ ಚಿಕ್ಕಮಕ್ಕಳಾಗಿದ್ದು, ಅವರ ಅಣ್ಣ ವಾದಿಯ ಗಂಡ ಮಂಜಪ್ಪರವರು ದುಡಿದು ಒಟ್ಟು ಕುಟುಂಬದ ಆದಾಯದಿಂದ ದಾವಾ ಐಟಂ ನಂ.2 ನ್ನು ನನ್ನ ಗಂಡ ಹಾಗೂ 1 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಹಾಗೂ ಪ್ರತಿವಾದಿಗಳು ದಾವಾ ಐಟಂ ನಂಬರ್ 2 ರಲ್ಲಿ ಸಮನಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ 1 ನೇ ಪ್ರತಿವಾದಿಯು ದಾವಾ ಐಟಂ ನಂಬರ್ 2 ರ ಖರೀದಿ ಕಾಲಕ್ಕೆ ಚಿಕ್ಕ ಮಕ್ಕಳಾಗಿದ್ದು ಅವರಿಗೆ ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ 1 ಕ್ರಯಪತ್ರದ ಸಮಯಕ್ಕೆ ನನ್ನ ಗಂಡ ಹಾಗೂ

1 ನೇ ಪ್ರತಿವಾದಿಯು ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ಗಂಡ ಕೂಲಿ ಕೆಲಸಕ್ಕೆ ಹೋಗುತ್ತಿದ್ದ 1 ನೇ ಪ್ರತಿವಾದಿಯು ಸಂಬಳ ಕೆಲಸಕ್ಕೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ಕೆಲಸಕ್ಕೆ ಹೋಗುತ್ತಿದ್ದರು ಹಾಗೂ 1 ನೇ ಪ್ರತಿವಾದಿಯು ಸಂಬಳಕ್ಕೆ ಇದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ಕ್ರಯಪತ್ರದ ಸಮಯದಲ್ಲಿ ನನ್ನ ಗಂಡ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಹಾಗೂ 1 ನೇ ಪ್ರತಿವಾದಿಯು ಸಂಬಳಕ್ಕೆ ಇರಲಿಲ್ಲ ಎಂದರೆ ಸರಿಯಲ್ಲ.

ನಾವು ಹಾಗೂ ವಾದಿಗಳು ಒಟ್ಟು ಕುಟುಂಬದಲ್ಲಿ ಇದ್ದುದ್ದರಿಂದ 1 ನೇ ವಾದಿಯು ವ್ಯವಸಾಯ ಸಹಕಾರ ಸಂಘ, ಕ್ಯಾಸಿನಕೆರೆಯಲ್ಲಿ ದಾವಾ ಆಸ್ತಿಗಳ ಮೇಲೆ ಸಾಲ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು 2009 ರಲ್ಲಿ ನನ್ನ ಗಂಡ ಬದುಕಿದ್ದರು ಸಹ ತೀರಿಕೊಂಡಿದ್ದಾರೆ ಎಂದು ಸುಳ್ಳು ಹೇಳಿ ಪೋರ್ಜರಿ ಸಹಿ ಮಾಡಿ 1 ನೇ ವಾದಿಯ ಗಂಡ ಸಾಲ ಪಡೆದುಕೊಂಡಿರುತ್ತಾರೆ. ಪೋರ್ಜರಿ ಸಹಿ ಮಾಡಿ 1 ನೇ ವಾದಿಯ ಗಂಡ ಸಾಲ ಪಡೆದುಕೊಂಡಿದ್ದಾರೆ ಎಂದು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೀರಾ ಎಂದರೆ ಹೌದು. ಸದರಿ ಪೋಲೀಸ್ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ